ಇಂಥದ್ದೇನಾದರೂ ನಡೆಯುತ್ತಿತ್ತು. ಅವನ ಕುಡಿತಕ್ಕೆ ಹೊತ್ತೆಂಬುದಿರಲಿಲ್ಲ. ಇದರ ಜೊತೆಗೆ ಮನೆಹಾಳ್ತನಕ್ಕೆ ಎಲೆ ಆಟವೂ ಇತ್ತು. ಅದಕ್ಕೆ ಜೊತೆ ಇದೋ, ಇದಕ್ಕೆ ಜೊತೆ ಅದೋ ತಿಳಿಯದು. ಪರಿಣಾಮ ಮತ್ತು ಫಲಿತಾಂಶಗಳಲ್ಲಿ ಎರಡೂ ಇದ್ದವು.

ಅಂದು ಮಧ್ಯರಾತ್ರಿ ಸುಮಾರಿನಲ್ಲಿ ತಾಯಿ– ಮಗಳ ರೋದನ ನಾಲ್ಕು ಜನ ಬಂದು ಸೇರುವಂತೆ ಮಾಡಿತ್ತು. ಅವನದು ಅದೇ ಮಾತು. ಆ ಮಿಂಡ ಅನ್ನೋನು ಯಾವನೋ ಬೊಗಳಲೇ ಅಂದರೆ ಉತ್ತರವಿಲ್ಲ. ಮಾತು ಮಾತ್ರ ಅದೇ. ಆಗ ಬಿತ್ತು ಬಂದಿದ್ದವರಲ್ಲೊಬ್ಬನಿಂದ ಕೆನ್ನೆಗೆ ಫಟೀರೆಂದು ಏಟು. 'ಈ ರಂಡೆ ಕಡೆ ನಿಲ್ತಿ, ನೀನೇನಾ ಅವಳ....' ಅಷ್ಟೇ ಜೋರಿನ ಇನ್ನೊಂದು ಏಟು ಬಿತ್ತು. ಮತ್ತೆ ಕೈ ಮೇಲಿದ್ದಿತು. ಉಳಿದವರು ತಡೆದರು. ಆದರೆ ಬಂದಿದ್ದವರ ನಡುವೆ ಇದ್ದು ಕೆರಳಿದ ಸುಬ್ಬುಲು ಮೂಲೆಯದ್ದಿದ್ದ ಪೊರಕೆ ಎತ್ತಿಕೊಂಡು ಹಾಕಿದ ಏಟುಗಳನ್ನು ತಪ್ಪಿಸುವುದು ಅಲ್ಲಿದ್ದ ಯಾರಿಂದಲೂ ಸಾಧ್ಯವಾಗಲಿಲ್ಲ. ಈ ಪೂಜೆಯಿಂದ ಅಮಲಿನ ದೆವ್ವ ಹೆದರಿತು. ಇಂದೊಂದು ಫೈಸಲಾಗಲೇ ಬೇಕೆಂದು ಬಂದಿದ್ದವರು ಕುಳಿತರು. ಅಳು ನಿಲ್ಲಿಸಿದ್ದ ರತ್ನಾಲು, ಮಿಂಡ ಎಂದರೆ ಏನು ಅನ್ನುವುದು ತಿಳಿಯದೆ, ಆ ಹೊತ್ತಿನಲ್ಲಿ ಯಾರನ್ನೂ ಕೇಳಲಾಗದೆ, ಅಮ್ಮನನ್ನು ತಬ್ಬಿಕೊಂಡು ಕುಳಿತಿದ್ದಳು.

ಇನ್ನಷ್ಟು ಜನ ಬಂದು ಸೇರಿದರು. ಎಲ್ಲ ಚಿನ್ನಪಾಪಲು ಪರವೇ ಇದ್ದರು. ಇದ್ದರೇನು ಎಂಬ ಧಿಮಾಕಿನಲ್ಲಿ ಸೇಕರಿ ನಿಂತಿದ್ದ. ಸುಮಾರು ಹೊತ್ತು ಮಾತು ನಡೆಯಿತು. ಎಲ್ಲರನ್ನು ದಬಾಯಿಸುವ ಧಿಮಾಕಿನಿಂದಲೇ ಮಾತನಾಡುತ್ತಿದ್ದ. ಅವನನ್ನು ಬಗ್ಗಿಸುವುದು ಕಷ್ಟವೆನಿಸುತ್ತಿತ್ತು. ಸುಬ್ಬುಲು ಪೊರಕೆ ಹಿಡಿದೇ ಎದ್ದು ನಿಂತಳು. ಚಿನ್ನಪಾಪಲು ಕೈ ಮುಗಿದು ತಡೆದಳು.

ಬುದ್ಧಿಮಾತು ಹೇಳಿ ತಾಕೀತು ಮಾಡಬೇಕು ಅಂದುಕೊಳ್ಳುತ್ತಿರುವಾಗಲೇ, 'ನೀನೂ ಅವಳೇ. ಅದಕ್ಕೇ ನಿನ್ನ ಸಪೋರ್ಟು' ಎಂದು ಬಾಯಿಜಾರಿದ ಸೇಕರಿ. 'ಅವನು ಯಾರಂತ ಬೊಗಳೊ ಬೇವರ್ಸಿ' ಅಂದವಳೇ, ಬಾಯಿ ತುಂಬಿಕೊಂಡಿದ್ದ ಎಲಡಿಕೆ ಎಂಜಲನ್ನು ಅವನ ಮುಖಕ್ಕೆ ಉಗಿದು, ಇನ್ನೂ ಕೈಯಲ್ಲಿಯೇ ಇದ್ದ ಪೊರಕೆಯಿಂದ ಬಾರಿಸಿಯೇ ಬಿಟ್ಟಳು ಸುಬ್ಬುಲು.

ಒಳ್ಳೆಯ ಮಾತುಗಳಿಗೆ ಬಗ್ಗುವ ಅಸಾಮಿ ಇವನಲ್ಲವೆಂದು ಅಲ್ಲಿದ್ದವರಿಗೆ ಅರ್ಥವಾಯಿತು. ಮುಂದಾಳಾಗಿ ಮಾತನಾಡುತ್ತಿದ್ದ ವೆಂಕಟಸಾಮಿ ಹೇಳಿದ: ಇನ್ನು ಮುಂದೆ, ಯಾವಾಗಲಾದರೂ ಸರಿ, ಹೀಗೆ ಮಾಡಿದರೆ ನಾವೆಲ್ಲ ಸೇರಿ ನೀನು ಜೈಲಿನಲ್ಲಿರುಂತೆ ಮಾಡೇವು ಜೋಕೆ. ಹೆಂಡತಿ ನೆಟ್ಟಗಿರೋಳಲ್ಲ ಅನ್ನೋನಾದರೆ ಬಿಟ್ಟು ತೊಲಗು. ಇಲ್ಲ ಸುಮ್ಮನೆ ಬಿದ್ದಿರ್ತೀನಿ ಅನ್ನೋನಾದ್ರೆ ಬಿದ್ದಿರು. ಇಷ್ಟು ದಿನದ ಹಾಗೆ ಮುಂದೂ ದಂಡಪಿಂಡ ಅಂದುಕೊಂಡು ಕೂಳು ಹಾಕ್ತಾಳೆ. ಗದುಕಿಕೊಂಡು ಬಿದ್ದಿರು. ಅವಳ ಪಾಲಿಗೆ ಊರು ಹಾಳಾಗಿಲ್ಲ ಅನ್ನೋದು ತಿಳಿದರ್‍ಲಿ ...

ನಿಂತೇ ಇದ್ದ ಸೇಕರಿ, ಬಾಗಿಲಿಗೆ ಹೋಗಿ, 'ಇದೆಲ್ಲ ಅದೆಷ್ಟು ದಿನ ನಡೀತದೊ ನೋಡ್ತೀನಿ' ಅನ್ನುತ್ತಲೇ ಅಲ್ಲಿಂದ ಓಡಿ ಹೋದ.

ಸೂರ್ಯ ಹುಟ್ಟುತ್ತಿದ್ದ. ಕರು ಬಿಟ್ಟು ಹಾಲು ಕರೆಯಲೆಂದು ಚಿನ್ನಪಾಪಲು ಹೊರಗೆ ಬಂದಳು. ಅಂಗಳದಲ್ಲಿ ಕಟ್ಟಿದ್ದ ಹಸು, ಕರು ಇರಲಿಲ್ಲ. ಚಿನ್ನಪಾಪಲು ಬಾಯಿ ಬಡಿದುಕೊಂಡು ಅತ್ತಳು. ರಾತ್ರಿ ಎಲ್ಲಾ ಮುಗೀತಲ್ಲ ಅಂದುಕೊಂಡವರಿಗೆ ಇದು ಮುಗಿದಿಲ್ಲ ಅನ್ನಿಸಿತು. ಏನಾದರು ಮಾಡೋಣ ಸುಮ್ಮನಿರು ಎಂದು ಸಮಾಧಾನ ಹೇಳಿದರು. 'ಇವತ್ತು ರೋಜೋರಪಲ್ಲಿ ಸಂತೆ. ಅಲ್ಲಿ ಮಾರಿರ್ತಾನೆ ಕಳ್ಳಮುಂಡೆ ಮಗ' ಅಂದಳು ಸುಬ್ಬುಲು.

ರತ್ನಾಲು ಶಾಲೆಗೆ ಹೋದ ಮೇಲೆ ನಾಲ್ಕು ಜನ ಕೂಡಿಕೊಂಡು, ಚಿನ್ನಪಾಪಲುಳನ್ನು ಹಿಂದಿಟ್ಟು ಕೊಂಡು ಸಂತೆಗೆ ಹೊರಟರು.

ಕಸಾಯಿಖಾನೆಗೆ ಹೊಡೆಯಲು ಲಾಟು ಕಟ್ಟಿದ್ದ ಲಾಟುಗಳಲ್ಲಿ ಹುಡುಕುತ್ತಿದ್ದಾಗ ಒಂದು ಲಾಟಿನಲ್ಲಿದ್ದ ಹಸು ಚಿನ್ನಪಾಪಲುಳನ್ನು ಕಂಡು ಅಂಬಾ ಎಂದಿತು. ಅವಳು ಓಡಿ ಹೋಗಿ ಅದರ ಕೊರಳನ್ನಪ್ಪಿದಳು. ಕರು ಅವಳ ಕೈ ನೆಕ್ಕಿತು. ಉಳಿದವರು ಅವಳ ಜೊತೆ ಸೇರಿದರು. ಲಾಟಿನ ಯಜಮಾನ ಬಂದ. ಅವನಿಗೆ ನಡೆದುದನ್ನು ವಿವರಿಸಿ, ಹಸುಕರುವನ್ನು ಬಿಡಲು ಕೇಳಿಕೊಂಡರು. ಅವನು ಬಿಲ್‌ಕುಲ್ ಆಗೊಲ್ಲವೆಂದ. ಕದ್ದ ಮಾಲು ಕೊಂಡಿದ್ದಿ ಅನ್ನೋದು ತಿಳಿದಿರಲಿ ಎಂದರೂ ಜಗ್ಗಲಿಲ್ಲ. ಏನು ಮಾಡುವುದೆಂದು ಅಂದುಕೊಳ್ಳುತ್ತಿರುವಾಗಲೇ